# ಪ್ರೀತಿ ಭಾರ; ಸಂಬಂಧ ದೂರ




■ ಹಿಂದಿ ಮೂಲ: ಶರದ್ ಸಿಂಗ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಎಚ್.ಎಸ್. ಮೋನಪ್ಪ

'ನಿಜ ಹೇಳಿದರೆ ರೇಗ್ತೀಯ', ರಿತಿಕ್ ಅದೆಷ್ಟು ಉದ್ಧಟತನದಿಂದ ಹೇಳಿದ್ದ. ನಾನೆಷ್ಟು 'ಹರ್ಟ್' ಆಗುತ್ತೇನೆಂದು ಸಹ ಯೋಚಿಸಲಿಲ್ಲ. ಇದು ರಿತಿಕ್‌ಗೆ ಪೌರುಷದ ಗೆಲುವಾಗಿತ್ತು, ಆನಂದವಾಗಿತ್ತು, ಅವನು ಒಂದು ಹೆಣ್ಣಿನ ನೋವನ್ನು, ವೇದನೆಯನ್ನು ಹೇಗೆ ಅರ್ಥ ಮಾಡಿಕೊಳ್ಳಲು ಸಾಧ್ಯ? ಮಹಿಳೆ ಪುರುಷರ ನಡುವಿನ ಈ ದ್ವಿಮುಖ ಅಂತರ ಎಂದು ನಾಶವಾಗುವುದು? ಪುರುಷ ಸದಾ ಮೊದಲನೆಯವನಾಗಿ ಇರಲು ಬಯಸುತ್ತಾನೆ. ಮಹಿಳೆ ಎರಡನೆಯವಳಾಗಿ ಇರುವ ಒಪ್ಪಂದವನ್ನು ಮಾಡಿಕೊಳ್ಳುತ್ತಿರುತ್ತಾಳೆ; ಅವಳು ಗುಡಿಸಲಿನಲ್ಲಿರುವ ಹೆಂಡತಿಯಾಗಿರಲಿ ಅಥವಾ ಅಮೆರಿಕದ ವೈಟ್ ಹೌಸಿನಲ್ಲಿರುವ ಹೆಂಡತಿಯಾಗಿರಲಿ, ಅವಳು ತನ್ನ ಗಂಡನ ರಾಸಲೀಲೆಗಳನ್ನು ಕ್ಷಮಿಸಿ ಬಿಡುತ್ತಾಳೆ. ಆದರೆ ಗಂಡನಾದವನು ಎಂದೂ ಕ್ಷಮಿಸುವುದಿಲ್ಲ. ಪುರುಷ ಮೊದಲು ಮತ್ತು ಮನುಷ್ಯ ನಂತರದಲ್ಲಿ ಎಂಬಂತೆ!

ಪುರುಷರ ಬಗೆಗಿನ ನನ್ನ ಈ ಅಭಿಪ್ರಾಯಗಳ ಹುಟ್ಟಿಗೆ ರಿತಿಕ್ ಮಾತ್ರ ಹೊಣೆಗಾರನಲ್ಲ. ರಿತಿಕ್ ಯಾವ ಅಭಿಪ್ರಾಯಗಳನ್ನು ಬೀಜಾರೋಪಣೆ ಮಾಡಿದ್ದನೋ, ಅವುಗಳನ್ನು ಚಿಗುರಿಸಿದ್ದು ವಿಲಾಸ ಮತ್ತು ಋಷಭ.

ನಾನು ರಿತಿಕ್‌ನಿಂದ ಬೇರೆಯಾದ ನಂತರ ಸ್ವತಂತ್ರಳಾಗಿದ್ದೆ. ಮತ್ತೊಮ್ಮೆ ನಾನು ನನ್ನದೇ ಆದ ರೀತಿಯಲ್ಲಿ ಬದುಕಲು ಬಯಸುತ್ತಿದ್ದೆ, ಯಾವುದೇ ಅಡೆತಡೆಗಳಿಲ್ಲದೆ ಬದುಕಲು ಬಯಸುತ್ತಿದ್ದೆ. ಆದರೆ ವಿಶಾಲ್ ಮತ್ತು ಋಷಭ, 'ನನ್ನ ಜಗತ್ತು ಬದಲಾಗಿದೆ, ನನ್ನ ಹೆಣ್ತನದ ಅರ್ಥ ಬದಲಾಗಿದೆ, ರಿತಿಕ್‌ಗಿಂತ ಮೊದಲಿನ ನನ್ನ ಜೀವನ ಎಂದೂ ನನಗೆ ಸಿಗಲಾರದು' ಎಂಬ ವಿಷಯವನ್ನು ಮನದಟ್ಟು ಮಾಡಿದರು. ಈಗ ನನ್ನ ಅಸ್ತಿತ್ವ ಸಹ ಮೊದಲಿನಂತಿರಲಿಲ್ಲ. ನಾನು ಅವರ ದೃಷ್ಟಿಯಲ್ಲಿ 'ದುರಾಚಾರಿಣಿ ಹೆಣ್ಣು' ಆಗಿದ್ದೆ. ನನ್ನ ಬಗ್ಗೆ ಜನರ ಈ ಅಭಿಪ್ರಾಯವನ್ನು ಎದುರಿಸುವುದು ಅದೆಷ್ಟು ವಿಷಾದಕರ ಮತ್ತು ಭಯಾನಕ! 'ದುರಾಚಾರಿಣಿ ಹೆಣ್ಣು' ಇದು ಹೆಣ್ಣಿನ ಅಸ್ಮಿತೆಯನ್ನು ಛಿದ್ರ ಛಿದ್ರಗೊಳಿಸುವ ಅಸ್ತ್ರವಾಗಿದೆ. 'ದುರಾಚಾರಿ ಗಂಡು' ಈ ಮಾತನ್ನು ಯಾವುದಾದರು ಪುರುಷರ ಬಗ್ಗೆ ಕೇಳಿದ್ದೀರ? ಪುರುಷ ಮಹಿಳೆಯ ಇಡೀ ಅಸ್ತಿತ್ವವನ್ನೇ ನುಂಗಿ ಹಾಕಿದರೂ, ಅವನೆಂದೂ 'ದುರಾಚಾರಿ ಗಂಡು' ಎಂದು ಕರೆಸಿಕೊಳ್ಳುವುದಿಲ್ಲ. ಒಂದು ವೇಳೆ ಇದರ ಸಮನಾರ್ಥ ಶಬ್ದಗಳನ್ನು ಪ್ರಯೋಗಿಸಿದ್ದಾಗ್ಯೂ, ಅವನನ್ನು ಅವಮಾನಿಸಲೋಸುಗ ಅಲ್ಲ, ಪ್ರತಿಯಾಗಿ ಅವನ ಯೋಗ್ಯತೆಯನ್ನು ಬೆಳಗಲೋಸುಗವೇ ಹೇಳಲಾಗುತ್ತದೆ.

ಕಸಬಾ ಮಹಿಳೆಯ ಅದೃಷ್ಟವೇ ಇದಾಗಿದೆ. ಅವಳು ಇಂಥ ಕಳಂಕಯುಕ್ತ ಶಬ್ದಗಳಿಂದ ಹೊರತಾಗಿ, ತನ್ನಿಚ್ಛೆಯಂತೆ

